
ISSN: 2347-2723 IMPACT FACTOR : 3.3754(UIF) VOLUME - 5 | ISSUE - 2 | SEPTEMBER - 2017

REVIEW OF LITERATURE

# ಪಿ. ಲಂಕೇಶ್‌ರವರ 'ಗುಣಮುಖ' ನಾಟಕದ ವಸ್ತು, ಭಾಷೆ, ತಂತ್ರ, ಶೈಲಿ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**



ಪಿ.ಲಂಕೇಶರ 'ಗುಣಮುಖ' ಸಮಸ್ತ ಮಾನವ ಜನಾಂಗದ ಏಳು ಬೀಳಿನ ಕಥೆ. ಮಾನವ ಪ್ರವೃತ್ತಿಗಳ ಮೂಲ ನೆಲೆಯನ್ನು ಹುಡುಕುವುದು ಈ ನಾಟಕದ ಮೂಲ ಉದ್ದೇಶ. ಕಥೆ ಐತಿಹಾಸಿಕವಾಗಿದ್ದರು, ಇಂದಿನ ಮಾನವನ ಚಲನ–ವಲನಗಳ ಮೇಲೆ ಬೆಳಕು ಚೆಲ್ಲುತ್ತದೆ. ಮನಶಾಂತಿ, ನೆಮ್ಮದಿಯನ್ನು ತೋರಿಸಿಕೊಡುತ್ತದೆ. ಮನುಷ್ಯ ಸಂಸಾರಿಕನಾಗಿದ್ದರೆ ನೆಮ್ಮದಿಯಿಂದ ಇರಲು ಸಾಧ್ಯ ಇಲ್ಲದಿದ್ದರೆ, ಕ್ರೂರತನ, ಏಕಾಂಗಿತನ ಈ ಎಲ್ಲವೂ ಕಾಡುವುದು ಖಚಿತ ಎನ್ನುವುದನ್ನು ತೋರಿಸುತ್ತಾರೆ. ನಾದಿರ್‌ಷಾನ ಮೂಲಕ ಕ್ರೂರತನ, ಏಕಾಂಗಿತನವನ್ನು ಚಿತ್ರಿಸಿದ್ದಾರೆ. ಸಾದತ್‌ಖಾನ್ ಮತ್ತು ಮುಲ್ಕ್‌ರಿಂದ ಪಿತೂರಿ, ವಂಚನೆ, ಕಪಟತನಗಳು ಹೇಗೆ ಅವರ ಸಾವಿಗೆ ತಾವೇ ಕಾರಣರಾಗುತ್ತಾರೆ ಎಂಬುದನ್ನು ತಿಳಿಸುತ್ತಾರೆ. ನಜಿರುದ್ದೀನ್‌ಷಾನಲ್ಲಿ ಹೇಡಿತನವನ್ನು ಕಂಡರೆ, ರಜ್ವಿಯಲ್ಲಿ ದಂಡನಾಯಕನಲ್ಲಿ ಇರಬೇಕಾದ ಎಲ್ಲಾ ಅರ್ಹತೆಗಳನ್ನು ಕಾಣುತ್ತೇವೆ. ಯಾವ ಹಣಕ್ಕೂ ಆಸೆಪಡದ ಪ್ರಾಮಾಣಿಕನಾದ ಹಕೀಮ ಅಲಾವಿಖಾನ್, ಒಬ್ಬ ಸಾಮಾನ್ಯವೈದ್ಯ ಚಕ್ರವರ್ತಿಯನ್ನು ಗುಣಪಡಿಸುವುಷ್ಟೆ ಅಲ್ಲದೆ ಆತನಲ್ಲಿರುವ ಕ್ರೂರತನವನ್ನು ಸಹ ಹೊಗಲಾಡಿಸಿ ಆತನನ್ನು ನಿಜವಾದ ಮನುಷ್ಯನನ್ನಾಗಿ ಮಾಡುತ್ತಾನೆ.

## ಪ್ರಸ್ತಾವನೆ

ಪಿ. ಲಂಕೇಶರು ಈ ನಾಟಕವು ತಾವು ಆಸ್ಪತ್ರೆಯಲ್ಲಿದ್ದಾಗ ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ಇದು ಇವರ ಕೊನೆಯ ನಾಟಕವು ಹೌದು. ಇತಿಹಾಸದಲ್ಲಿ ನಾದಿರ್‌ಷಾನ ಬಗ್ಗೆ ಓದಿ ಟಿಪ್ಪಣೆ ಮಾಡಿಕೊಂಡಿರುವುದಾಗಿ ಮತ್ತು ಈತನ ಕ್ರೂರತನ ಮುಂಗೋಪಿತನಗಳು ನನಗೆ ಆಕರ್ಷಿಸಿದವು ಎನ್ನುತ್ತಾರೆ. ಮೂರು ದೃಶ್ಯಗಳಲ್ಲಿ ನಲವತ್ತೊಂಬತ್ತು ಪುಟದ ನಾಟಕ ಇದು ನಾದಿರ್‌ಷಾ 1739ರಲ್ಲಿ ಭಾರತವನ್ನು ಪ್ರವೇಶಿಸಿ 1740 ಮಾರ್ಚ್ 22ರಂದು ದೆಹಲಿಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡನು. ಈ ಭಾರತದಲ್ಲಿ ಅಥವಾ ದೆಹಲಿಯಲ್ಲಿ ಉಳಿದಿರುವುದು ಕೇವಲ ಎರಡು ತಿಂಗಳು ಮಾತ್ರ ಈ ಅವಧಿಯಲ್ಲಿ ನಡೆದ ಘಟನೆಯ ಸಾರವನ್ನೆ ಹೇಳುತ್ತದೆ.

## ವಸ್ತು

ಜಗತ್ತಿನ ಯಾವುದೇ ನಾಟಕವಿರಲಿ ಅದಕ್ಕೆ ವಸ್ತುವೆ ಪ್ರಮುಖ ಪಾತ್ರವಹಿಸುತ್ತದೆ. ಯಾವುದೇ ವಸ್ತುವಿಲ್ಲದೆ ನಾಟಕ ರಚನೆ ಸಾಧ್ಯವಿಲ್ಲ. ಯಾವುದೇ ನಾಟಕಕ್ಕೆ ಕಥಾವಸ್ತು ಮುಖ್ಯ. ನಾಟಕಕಾರ ತನ್ನ ಅಂತಸ್ಸ್ವರೂಪ ಸ್ಫೂರ್ತಿಯನ್ನು ವಸ್ತುವೊಂದರ ಪರಿಯಜ್ಞೆಯಲ್ಲಿ ಎರಕ ಹೊಯ್ಯುತ್ತಾನೆ. ನಂತರ ಆ ನಾಟಕ, ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಜೀವನವನ್ನು ಪಡೆಯುತ್ತದೆ. ಒಬ್ಬ ನಾಟಕಕಾರನಿಗೆ ಒಂದು ವಸ್ತುವಿನ ಬಗ್ಗೆ ಪರಿಪೂರ್ಣವಾದ ಜ್ಞಾನವಿದ್ದರೆ ಸಾಲದು ಅದನ್ನು ಸಮರ್ಥವಾದ ರೀತಿಯಲ್ಲಿ ಒಂದು ಮಾಧ್ಯಮವಾಗಿ ಕಲಾತ್ಮಕ ನಿರೂಪಿಸುವ ಕೌಶಲ್ಯ ಅವನಲ್ಲಿದ್ದರೆ ಮಾತ್ರ ಆ ಕೃತಿಯು ಯಶಸ್ವಿಯಾಗುವುದು. **"ಕಥಾವಸ್ತುವಿನ ಲಕ್ಷಣವೆಂದರೆ ಅದರಲ್ಲಿ ತುಂಬಾ ಹೋರಾಟವಿರಬೇಕು, ಕಲೆ, ಕಾದಂಬರಿ ಹಾಗೂ ನಾಟಕಗಳಿಗೆ ವಸ್ತುವನ್ನಾಗಿ ಆಯ್ದುಕೊಳ್ಳಬೇಕಾದರೆ ಲೇಖಕನು ಅದರಲ್ಲಿಯ ಹೋರಾಟದ ಪ್ರಮಾಣಗಳನ್ನು ಅರಿತುಕೊಳ್ಳಬೇಕು. ಈ ಹೋರಾಟವು ಸಮಾಜ ವ್ಯಕ್ತಿಗಳಲ್ಲಿ ವರ್ಗಗಳಲ್ಲಿ ಸತ್ಯಾಸತ್ಯೆಗಳಲ್ಲಿ ಇರಬಹುದು"**[1] ಸಾಹಿತಿ ಯಾದವನು ತಾನು ಬದುಕುತ್ತಿರುವ ಸಮಾಜದಲ್ಲಿ ಬೇರು ಬಿಟ್ಟಿದ್ದ ಅನಿಷ್ಟಗಳ ವಿರುದ್ಧ ಪ್ರತಿಭಟಿಸಿ ನಿಂತು ಸಂಸ್ಕೃತಿಯ ಆಚರಣೆ ಸಂಪ್ರದಾಯದ ಹಲವು ಪದ್ಧತಿಗಳು ವಿರೋಧಿಸುವುದು ನಾಟಕದ ಕಥಾವಸ್ತುಗಳಾಗುತ್ತದೆ. ಕಥೆಯನ್ನು ಹೇಳುವ ಐವತ್ತು ಲಕ್ಷ ರೀತಿಗಳಿವೆ ಎಂಬುದು ಹೇನ್ರಿ ಜೇಮ್ಸ್‌ನ ಅಭಿಪ್ರಾಯವಾಗಿದೆ. ಹೊಸಗನ್ನಡ ಸಾಹಿತ್ಯದ ಎಲ್ಲಾ ಘಟ್ಟಗಳಲ್ಲಿ ನಾಟಕಕ್ಕೆ ಮಹತ್ವವಿರುವುದನ್ನು ಕಾಣುತ್ತೇವೆ.

ಈ ಗುಣಮುಖ ನಾಟಕ ಇತಿಹಾಸದಲ್ಲಿ ನಡೆದ ಸತ್ಯ ಘಟನೆಯಾಗಿದೆ. ಇದರ ವಸ್ತು ಮೊದಲೆ ನಡೆದು ಹೋದದ್ದು, ಆದರೆ ಈ ನಾಟಕ ವಸ್ತುವಿನ ಬಗ್ಗೆ ಲೇಖಕರೆ ಹೇಳುವ ಮಾತುಗಳಿವು **"ನಾದಿರ್‌ನ ಈ ವಿಚಿತ್ರ ದಿಗ್ವಿಜಯದ, ಸೋಲಿನ ಜೀವನದಲ್ಲಿ ನನ್ನ ಮನಸ್ಸು ಸೆಳೆದದ್ದು ಆತನ ಅನುಮಾನ, ನಿಷ್ಠುರತೆ ಮತ್ತು ಕಾಯಿಲೆ; ಘಟನಾವಳಿಗಳು ಮತ್ತು ಮನುಷ್ಯರ ದ್ವಂದ್ವಗಳು ನಾದಿರ್‌ನನ್ನು ರಸಾತಳಕ್ಕೆ ತಳ್ಳಿದರೂ ಆತ ಎದ್ದು ಬರುವ ರೀತಿ ಮತ್ತು ಸತ್ಯ ಮತ್ತು ಸುಳ್ಳು ಒಬ್ಬ ಸ್ವಪ್ರತಿಷ್ಠನನ್ನು ಸ್ಪರ್ಶಿಸುವ ಬಗೆ. ಖುಷ್‌ವಂತ್ ಸಿಂಗ್ ಅವರ ದೆಹಲಿ ಪುಸ್ತಕದಲ್ಲಿ ಅಲಾವಿಖನ್ ಎಂಬ ಹಕೀಮ್‌ನ ಬಗ್ಗೆ ಒಂದೆರೆಡು ಪ್ಯಾರಾ ಇವೆ. ಅದನ್ನು ಓದಿದಾಗ ನಾದಿರ್ ಬಗ್ಗೆ ಅಲ್ಲಲ್ಲಿ ಓದತೊಡಗಿದೆ. ಒಂದು ವರ್ಷ ಕಾಡುತ್ತಿದ್ದ ಈ ವಸ್ತು ಕಳೆದ ವರ್ಷ ನಾಟಕವಾಯಿತು"**[2] ಎನ್ನುತ್ತಾರೆ.

ದಾಳಿಗಳನ್ನು ಮಾಡುವಲ್ಲಿ, ಯುದ್ಧದಿಂದ ಸಿಗುವ ಸುಖ, ಸಂಪತ್ತಿಗಾಗಿ ಹಾತೊರೆಯುತ್ತಿದ್ದ, ಪ್ರಜೆಗಳ ನೆಮ್ಮದಿಯ ಬಗ್ಗೆ ಎಂದೂ ಗಮನಕೊಡದಷ್ಟು ತಾಳ್ಮೆಗೆಟ್ಟ ನಾದಿರ್ ಮನುಷ್ಯನ ಸೋಗಲಾಡಿತನ, ಸುಳ್ಳು ಮತ್ತು ಮೋಸ ಕಂಡು ಬೆಂಕಿಯಾಗುತ್ತಿದ್ದ, ನಾದಿರ್‌ಷಾನ ದಾಳಿ ಹಾಗೂ ತನ್ನ ಕ್ರೂರತನ ಬಿಟ್ಟು ಹಕೀಮ ಅಲಾವಿಖಾನ್ ಮುಖಾಂತರ ಪರಿವರ್ತನೆಯಾಗುವುದೇ ಈ ನಾಟಕದ ವಸ್ತುವಾಗಿದೆ.

**ಭಾಷೆ**

ಭಾಷೆ ನಿಂತ ನೀರಲ್ಲ ಹರಿಯುತ್ತಿರುವ ಪ್ರವಾಹ ನಾಟಕಕಾರನೊಬ್ಬ ನಾಟಕಕ್ಕೆ ನಿರೂಪಣೆಯ ಉತ್ತಮ ಕಲಾರೂಪ ಕೊಡಲು ಭಾಷೆ ಅತ್ಯಂತ ಅವಶ್ಯಕವಾದ ಮಾಧ್ಯಮವಾಗಿದೆ. ಭಾಷೆಗೆ ಪರಸ್ಪರ ಸಂಪರ್ಕ ಕಲ್ಪಿಸುವ ಶಕ್ತಿಯಿದೆ. ಆಸೆ, ಅನಿಸಿಕೆ, ಅನುಭವ, ಕಲ್ಪನೆಗಳನ್ನು ಭಾಷೆಯ ಮೂಲಕವೆ ಪರಸ್ಪರ ಅರಿತುಕೊಳ್ಳುತ್ತೇವೆ. ಬರಹಗಾರ ತನ್ನ ಅನುಭವದ ಸ್ವರಗಳನ್ನು ಬಿಂಬಿಸುವಲ್ಲಿ ಮತ್ತು ಅನಿಸಿಕೆಗಳನ್ನು ಭಾಷೆ ಎಂಬ ಮಾಧ್ಯಮ ಬಳಸಿಕೊಂಡು ಉತ್ತಮ ನಾಟಕವನ್ನು ನಿರೂಪಿಸುತ್ತಾನೆ. ಒಂದು ವಸ್ತುವನ್ನು ಅಥವಾ ಘಟನೆಯನ್ನು ಕಂಡು ಅನುಭವಿಸಿ ಅದನ್ನು ಕಲ್ಪನಾ ಲೋಕದ ಸೃಷ್ಟಿಗೆ ಓರೆ ಹಚ್ಚಿ ತನ್ನದೇ ರೀತಿಯಲ್ಲಿ ತನ್ನ ಪರಿಸರದ ಸುತ್ತಲಿನ ಭಾಷೆಯಲ್ಲಿ ಅಭಿವ್ಯಕ್ತಪಡಿಸುತ್ತಾನೆ.

ಭಾಷೆ ಇಲ್ಲದೆ ಹೋದಲ್ಲಿ ಮಾನವ ಬದುಕುವುದ ಕಷ್ಟಕರ ಅಂತೆಯೇ ಸಂಸ್ಕೃತ ಕಾವ್ಯಮಿಮಾಂಸಕಾರನಾದ ದಂಡಿ **"ಭಾಷೆಯೆಂಬ ಜ್ಯೋತಿ ಬೆಳಗದೆ ಹೋಗಿದ್ದರೆ ಜಗತ್ತು ಕತ್ತಲೆಯಲ್ಲಿ ಮುಳುಗುತ್ತಿತ್ತು"**[3] ಮತ್ತೊರ್ವ ಪಾಶ್ಚಿಮಾತ್ಯ ವಿದ್ವಾಂಸ ಜಾಕೋಬ್‌ಕೋರ್ಗ್ **"**ಹೇಗೆ ಬೇಕೊ ಹಾಗೆ ಹಿಗ್ಗಿಸಿ ಕುಗ್ಗಿಸಿ ಹೇಳಬಹುದಾದದ್ದು ಕೃತಕವಾದದ್ದು ನಮ್ಮ ಅನಿಸಿಕೆಗಳನ್ನು ಹೊರಗೆಡುವುದಕ್ಕಿರುವ ಮಾಧ್ಯಮವೇ ಭಾಷೆ ಎಂದು ಅಭಿಪ್ರಾಯಪಡುತ್ತಾರೆ. ಭಾರತೀಯನಾದ ಭಟ್ಟಕಳಂಕನು **"ವ್ಯವಹಾರಕ್ಕಾಗಿ ಸಂಕೇತಗಳಿಂದ ಒಡಗೂಡಿದ ಶಬ್ದಸಮುದಾಯವೆ ಭಾಷೆ"**[4] **'**ಮನುಷ್ಯನನ್ನು ಕುರಿತು ಏನನ್ನೂ ತಿಳಿಯಬೇಕಾದಾಗ ಅವನ ಭಾಷೆಯ್ನು ಮೊದಲು ತಿಳಿ**'** ಜಗತ್ಪ್ರಸಿದ್ಧ ಭ್ಲೂಮ್ ಫೀಲ್ಡರ್ ಅಭಿಪ್ರಾಯವಾಗಿದೆ. ಇತಿಹಾಸ ವಿಜ್ಞಾನ, ನ್ಯಾಯ, ನೀತಿ, ಧರ್ಮ, ಆಚಾರ, ವಿಚಾರ, ಸಂಸ್ಕೃತಿಗಳನ್ನು ತನ್ನದೆಯಾದ ಭಾಷೆಯಲ್ಲಿ ಮೂಡಿಬರುವುದು ವಿಶೇಷವಾಗಿದೆ.

ನಾಟಕಕಾರ ತನ್ನ ಸುತ್ತಲಿನ ಬಳಕೆಯಲ್ಲಿರುವ ಭಾಷೆಯ ಪ್ರಭಾವದಿಂದ ಅತನ ಕೃತಿಗಳಲ್ಲಿ ಬಳಕೆಯಾಗುವುದು ಸಹಜವೆ ಸರಿ. ಪಿ.ಲಂಕೇಶರವರು ಭಾಷೆ ಗ್ರಂಥಸ್ಥ ಶೈಲಿಯಾದರೂ ಓದುಗರನ್ನು ಸುಲಭವಾಗಿ ಅರ್ಥವಾಗುವಂತೆ ಸರಳ ರೀತಿಯಲ್ಲಿ ವರ್ಣನಾತ್ಮಕ ಭಾಷೆಯಲ್ಲಿ ರಚಿಸಿದ್ದಾರೆ. ನಾಟಕದಲ್ಲಿ ಸಂಭಾಷಣೆಗಳನ್ನು ಬಳಸುತ್ತಾರೆ. ಅವುಗಳಿಗೆ ವಿವರಣೆಯನ್ನು ತಾವೇ ಕೊಡುತ್ತಾರೆ. ಅವಶ್ಯವಿದ್ದಲ್ಲಿ ಕೆಲವೊಂದು ಪದ್ಯಗಳನ್ನು ರಚಿಸಿ ನಜಿರುದ್ದೀನ್‌ಷಾ ಕಡೆಯಿಂದ ಹೇಳಿಸುತ್ತಾರೆ. ನಾದಿರ್‌ಷಾನ ಪರಾಕ್ರಮದ ಕುರಿತ ಕವನ

**"ನಾದಿರ್: ತಾವು ಕವನ ರಚಿಸ್ತೀರಂತೆ. ಒಂದು ಕವನ ಹೇಳೇ ಬಿಡಿ ಕೇಳೋಣ.**
**ನಜಿರುದ್ದೀನ್: 'ಹಿಮಾಲಯ ಪರ್ವತದ ತಪ್ಪಲಲ್ಲಿ**
**ನಾದಿರ್: (ಮುಂದುವರಿಸಿ)**

**ಸಿಂಹವೊಂದು ಮೊಗದೋರಿತು**
**ಗುಬ್ಬಚ್ಚಿಗಳು ದಿಕ್ಕುತೋಚದೆ**
**ಗೂಡಿನಲ್ಲಿ ಮುದುಡಿ ಕೂತವು**
**ಇನ್ನೂ ಹೇಳಲೆ?"**[5]

ಈ ರೀತಿಯಾಗಿ ಅಗತ್ಯವಿದ್ದಾಗ ಪದ್ಯಗಳನ್ನು ರಚಿಸಿ ಸಹೃದಯರ ಮನಸ್ಸನ್ನು ಮುದಗೊಳಿಸುತ್ತದೆ. ಹಲವು ಕಡೆ ಸಂಭಾಷಣಾ ಶೈಲಿಯನ್ನು ಬಳಸುತ್ತಾರೆ. ನಜಿರುದ್ದೀನ್‌ಷಾರು ನಮ್ಮ ಭಾರತೀಯ ಪ್ರಜೆಗಳ ಸಂಸ್ಕಾರವನ್ನು ತಿಳಿಸುತ್ತಾರೆ. ರಾಜರಿಗೆ ನೆಗಡಿಯಾಗುತ್ತದೆ. ಮೈಬೆವರುತ್ತದೆ ಎನ್ನುವುದು ಜನಕ್ಕೆ ತಿಳಿಯದು ಎಂದು ಕೇಳಿದ್ದಾಗ

**"ನಾದಿರ್: ರಜ್ವಿ ಈ ನಮ್ಮ ಜನ ಸೇವಕನಿಗೆ ಜ್ವರ ಬರುತ್ತೋ ಕೇಳು.**
**ರಜ್ವಿ: ನಿಮಗೆ ಜ್ವರ ತಲೆನೋವು ಬರುತ್ತವೆಯೇ ಅಂತ ಕೇಳ್ತದ್ದಾರೆ.**
**ನಜಿರುದ್ದೀನ್: ಮನುಷ್ಯ ಅಂದಮೇಲೆ**
**ನಾದಿರ್: ಅದು ಒಳ್ಳೆಯ ಸುದ್ದಿ**
**ನಜಿರುದ್ದೀನ್: ಯಾವುದು?**
**ನಾದಿರ್: ನೀನೂ ಮನುಷ್ಯ ಅನ್ನೋದು.**
**ನಜಿರುದ್ದೀನ್: ನಾನು ತಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳಬೇಕಾಗಿದೆ.**

**ನಾದಿರ್: ಬೇಗ ನನ್ನ ತಲೆ ಸಿಡಿದು ಹೋಗ್ತಿದೆ.**
**ನಜಿರುದ್ದೀನ್: ಕೆಲವೇ ಕ್ಷಣಗಳ ಹಿಂದೆ ಇಲ್ಲಿಗೆ ನಮ್ಮ ದಿವಾನ ಸಾದತ್‌ಖಾನ್ ಬಂದಿದ್ದ.**
**ನಾದಿರ್: ಹೌದು ಜನಸೇವಕ, ನಮ್ರ ಕಾರ್ಯಕರ್ತ**
**ನಜಿರುದ್ದೀನ್: ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.**
**ನಾದಿರ್: ಓ (ಎಲ್ಲರೂ ಚಕಿತರಾಗುವರು) ಏಕೆ?**
**ನಜಿರುದ್ದೀನ್: ಆತನ ರಾಜದ್ರೋಹ, ಸ್ವಾಮಿ ದ್ರೋಹವನ್ನು ತಾವೂ ಪತ್ತೆ ಹಚ್ಚಿ ಶಿಕ್ಷಿಸಿದಿರಿ, ಈ ದೇಶದಲ್ಲಿ ದೊರೆಯಾದವನಿಗೆ ತಮ್ಮವರ ದ್ರೋಹ ಬೇಗ ತಿಳಿಯುವುದಿಲ್ಲ"**[7]

ಸಂಪೂರ್ಣ ಗ್ರಂಥವೂ ಅಲ್ಲದೆ ಸಂಪೂರ್ಣ ಆಡು ಭಾಷೆಯೂ ಅಲ್ಲದ ಭಾಷೆ ಲಂಕೇಶರದು, ತಾವೂ ಪತ್ರಕರ್ತರಾಗಿರುವುದರಿಂದ ಯಾರೊಬ್ಬ ಓದುಗರಿಗೂ ತಿಳಿಯುವಂತೆ ಬರೆಯುವ ಭಾಷೆ ಲಂಕೇಶರದು.

## ತಂತ್ರ

ಒಂದು ನಾಟಕ ರಚನೆಯಾಗಬೇಕಾದರೆ ತಂತ್ರ ಅತಿಮುಖ್ಯ, ತಂತ್ರವಿಲ್ಲದೆ ನಾಟಕ ರಚನೆ ಮಾಡಿದರೆ ಅದು ಸಪ್ಪೆಯಾಗುತ್ತದೆ. ತಂತ್ರವನು ದೃಷ್ಟಿಯಲ್ಲಿಟ್ಟುಕೊಂಡು ನಾಟಕ ರಚನೆ ಮಾಡಿದರೆ ಮಹತ್ವದ್ದಾಗುತ್ತದೆ. ತಂತ್ರವೂ ಅಭಿವ್ಯಕ್ತಿಯ ಒಂದು ವಿಧಾನವೆಂಬಂತೆ ಬಳಕೆಯಾಗಿದೆ.

ವಸ್ತುವಿನ ನಿರ್ವಹಣಾ ಕ್ರಮವೇ ತಂತ್ರ ಎನಿಸಿಕೊಳ್ಳುತ್ತದೆ. ಅಭಿವ್ಯಕ್ತಿ ಕ್ರಮ ಮೌಲ್ಯಮಾಪನ ಕ್ರಿಯೆಯ ತಂತ್ರವಾಗಿದೆ. ಕಥಾಸಂವಿಧಾನದ ಬೆಳವಣಿಗೆ ಉದ್ದೇಶಗಳನ್ನು ಸಾಧಿಸುವ ಕೌಶಲ್ಯ ಕುತೂಹಲ ಕೆರಳಿಸುವ ಕಥನ ಪದ್ಧತಿ ಘಟನಾವಳಿಗಳು ಇದರ ಪರಿಧಿಯಲ್ಲಿ ಬರುತ್ತದೆ. **"ಲೇಖಕನ ಸಾಮಗ್ರಿಯಾದ ಅನುಭವ ತನ್ನ ಬಗ್ಗೆ ಸರಿಯಾಗಿ ಗಮನವನ್ನು ನೀಡಲು ಅವನನ್ನು ಒತ್ತಾಯಿಸುವ ಸಾಧನ ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು ಶೋಧಿಸಲು, ವಿಕಾಸಗೊಳಿಸಲು, ಅದರ ಅರ್ಥವನ್ನು ಸೂಚಿಸಲು ಹಾಗೂ ಕೊನೆಯದಾಗಿ ವಸ್ತುವನ್ನು ಬೆಲೆ ಕಟ್ಟಲು ಇರುವ ಏಕಮಾತ್ರ ಸಾಧನವೆ ತಂತ್ರ"**[8] ಎಂದು ಮಾರ್ಕ್‌ಶೂರರು ಅಭಿಪ್ರಾಯಪಡುತ್ತಾರೆ. ವಸ್ತು ಮತ್ತು ಲೇಖಕನ ಧೋರಣೆಗಳೆ ತಂತ್ರವಾಗಿ ನೆಲೆಗೊಳ್ಳುತ್ತವೆ.

**'ಗುಣಮುಖ'** ನಾಟಕದಲ್ಲಿ ಸಂಭಾಷಣಾ ರೀತಿಯಲ್ಲಿ ಕಥೆ ಹೇಳುತ್ತಾ ಸಾಗುತ್ತಾರೆ. ಮನೋವಿಶ್ಲೇಷಣಾತ್ಮಕ ತಂತ್ರವನ್ನು ಬಳಸಿ ಮನುಷ್ಯನ ಏಕಾಂಗಿತನಗಳು ಪತ್ತೆ ಹಚ್ಚುತ್ತಾರೆ. ಸಾದತ್‌ಖಾನ್ ನಾದಿರ್‌ಷಾನ ಭೇಟಿಗಾಗಿ ಬಂದಿರುತ್ತಾನೆ. ಸಾದತ್‌ಖಾನ್ ಬರುವುದನ್ನು ಮೊದಲೇ ತಿಳಿದಿದ್ದ

**"ನಾದಿರ್: ಕಾಯಲು ಹೇಳು (ಚಪ್ಪಾಳೆ ಹೊಡೆದು, ಕೆಮ್ಮಿ ನಾಟಕವೊಂದನ್ನು ನೋಡುವ ಖುಷಿಯಿಂದ ತುಂಟತನದಿಂದ ಮಾತಾಡುವವನು) ನೀವೆಲ್ಲ ಆಚೆ ಇರಿ (ಸೈನಿಕರು ಹೋಗುವರು) ರಜ್ಜಿ, ಈ ಮೂರ್ಖನ ಮಸ್ಕಿರಿ ನೋಡಿ ಗೊತ್ತಾ? ಇವನು ಸಾದತ್‌ಖಾನ್; ಇವನಂಥ ಇನ್ನೊಬ್ಬ ಕಳ್ಳ ದಿವಾನ ನಿಜಾಮ್–ಉಲ್–ಮುಲ್ಕ್ ಇವರು ದೊರೆ ನಜಿರುದ್ದೀನಾಷಾನ ದಿವಾನರು. ರಂಗೋಲೆ ಕೆಳಗೆ ನುಸಿಯಬಲ್ಲ ಮಾಯಾವಿಗಳು, ಇವರಿಬ್ಬರೂ ನಮಗೆ ಕಾಗದ ಬರೆದು ದಂಡೆತ್ತಿ ಬಂದು ನಜಿರುದ್ದೀನ್‌ಷಾನನ್ನು ಕೆಳಗಿಳಿಸಿ ಅಂತ ಕೇಳಕೊಂಡರು"**[9], ಒಂದೊಂದು ಪಾತ್ರಕ್ಕೂ ಅದರದೆ ಆದ ಪರಿಮಿತಿಯಲ್ಲಿ ತಂತ್ರವನ್ನು ಹೆಣೆಯುತ್ತಾರೆ.

ಕಥೆಯು ಪ್ರಾರಂಭವಾದಾಗ ಪೋಷಕ ಪಾತ್ರಗಳನ್ನು ತರುವುದರ ಮೂಲಕ ಕಥೆಯು ಮುಂದುವರೆಸುತ್ತಾರೆ.

## ಶೈಲಿ

ಶೈಲಿಯು ಬಗ್ಗೆ ನಿಖರವಾದ ಸ್ಪಷ್ಟವಾದ ವ್ಯಾಖ್ಯೆ ನೀಡುವುದು ಕಷ್ಟ. ಪ್ರತಿಯೊಬ್ಬನಾಟಕಕಾರನಿಗೂ ಅನುಭವಗಳನ್ನು ಅಭಿವ್ಯಕ್ತಿಸುವ ಸಂದರ್ಭದಲ್ಲಿ ತನಗರಿವಿಲ್ಲದೆ ವಿಶಿಷ್ಟವಾದ ರೀತಿಯ ಶೈಲಿಯನ್ನು ಬಳಸುತ್ತಾನೆ. ದೇಜಗೌರವರು ಶೈಲಿಯ ಕುರಿತು **"ಶೈಲಿ ಪ್ರಧಾನವಾಗಿ ವ್ಯಕ್ತಿನಿಷ್ಠ ಆದರೆ ಅದು ಸಮಷ್ಟಿಯ ಮೇಲೆ ಪ್ರಭಾವ ಬೀರುವುದಲ್ಲದೆ ಅದರಿಂದ ಪ್ರಭಾವಿತರಾಗುವುದುಂಟು ಆದ್ದರಿಂದ ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವು ಹೌದು ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವು ಹೌದು"**[10] ಸಾಹಿತ್ಯದ ಅಭಿವ್ಯಕ್ತಿಯ ವಿಶಿಷ್ಟ ರಿತಿ ಶೈಲಿ ಎಂದಾಗ ಒಬ್ಬೊಬ್ಬ ಲೇಖಕನಿಗೂ ಒಂದೊಂದು ರೀತಿಯ ಶೈಲಿ ಇರುತ್ತದೆ. ಈ ಬರಹ ಇವರದೆ ಎಂದು ಸ್ಪಷ್ಟವಾಗಿ ತಟ್ಟನೆ ಹೇಳುವ ಮಟ್ಟಿಗೆ ಬೆಳೆದಿರುತ್ತದೆ. **"ಭಾಷೆಯನ್ನು ಬಳಸುವ ರೀತಿಯೆ ಶೈಲಿ, ಸಾಹಿತ್ಯ ಭಾಷೆಗೆ ಹೊಲಿಸಿದ ಅಲಂಕಾರವೆ ಶೈಲಿ, ಲೇಖಕನಲ್ಲಿ ಇರಬಹುದಾದ ಅಭಿವ್ಯಕ್ತಿಯ ಪ್ರತ್ಯೇಕತೆಯೆ ಶೈಲಿ, ಭಾಷೆಯ ಸಾಧ್ಯತೆಗಳನ್ನು ಪ್ರಕಟಿಸುವ ಸಾಧನವೆ ಶೈಲಿ, ಅಭಿವ್ಯಕ್ತಿಗೆ ತೀಕ್ಷ್ಣತೆಯನ್ನು ಮುಟ್ಟಿಸುವ ವಸ್ತುವೆ ಶೈಲಿ, ಅರ್ಥಪೂರ್ಣವಾದ ಉತ್ತಮ ಬರವಣಿಗೆಯೆ ನಿಜವಾದ ಶೈಲಿ"**[11] ಆಂಗ್ಲ ಸಾಹಿತ್ಯದ 'ಣಥಿಟಜೆ ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ವ್ಯಕ್ತಿಯ ಶೈಲಿ **'ವ್ಯಕ್ತಿತ್ವವೆ ಶೈಲಿ'** ಎಂದು ಹೇಳುವುದುಂಟು ಕಾವ್ಯದೇವಿಯ ಮುಖಬಣ್ಣವೆ ಶೈಲಿ.

ಲಂಕೇಶರು ತಮ್ಮದೆಯಾದ ವಿಶಿಷ್ಟ ಶೈಲಿಯ ಮುಖಾಂತರ ಅಚ್ಚುಕಟ್ಟಾಗಿ ರಚಿಸಿದ್ದಾರೆ. ಲಂಕೇಶ'ರ ಪುಟ್ಟ ಪುಟ್ಟ ವಾಕ್ಯಗಳನ್ನು ಬಳಸುವ ಶೈಲಿ, ಓದುಗನನ್ನು ಓದಿಸಿಕೊಂಡು ಹೋಗುವ ಶೈಲಿ ಇವರದಾಗಿದೆ. ಪ್ರತಿಯೊಂದು ಪಾತ್ರಕ್ಕೂ ಅದರದೆಯಾದ ಶೈಲಿಯಲ್ಲಿ ಮಾತನಾಡಿಸುತ್ತಾರೆ. ರಾಜನ ಪಾತ್ರ ಬಂದಾಗ ಆಜ್ಞೆಯ ರೂಪದಲ್ಲಿ ಧೀರ ಗಂಭೀರವಾಗಿ ಮಾತನಾಡಿದರೆ, ಸೇವಕನ ಪಾತ್ರ ಬಂದಾಗ ನಮ್ರವಾಗಿ ಮಾತನಾಡುತ್ತಾರೆ.

ನಾದಿರ್‌ಷಾ ಮತ್ತು ಹಕೀಮ ಅಲಾವಿಖಾನ್‌ನ ನಿಷ್ಠುರವಾದ ಮಾತುಗಳನ್ನು ಕೇಳಬೇಕು

**"ನಾದಿರ್: ಕೇಳು, ಬೇಗ, ಬೇಗ, ಕೇಳು (ಮಿಕ್ಕವರಿಗೆ) ನೀವೆಲ್ಲ ಹೋಗಿ (ಹೋಗುವರು)**
**ಅಲಾವಿ: ನಿಮ್ಮ ಹೆಸರೇನು?**
**ನಾದಿರ್: (ಅಚ್ಚರಿ ಸಿಟ್ಟಿನಿಂದ) ಆ್ಞ ? ಏನಂದೆ?**
**ಅಲಾವಿ: ದಯವಿಟ್ಟು ನಿಮ್ಮ ಹೆಸರು ಹೇಳ್ತೀರಾ?**
**ನಾದಿರ್ : ನಮ್ಮ ಹೆಸರು ನಿನಗೆ ಗೊತ್ತಿಲ್ಲವೆ?**
**ಅಲಾವಿ: ಇಲ್ಲ**
**ನಾದಿರ್: ನಿನ್ನೋಬ್ಬ ಮೂರ್ಖ ಇರಬೇಕು"**[12] ಈ ರೀತಿ ಅತ್ಯಂತ ಪುಟ್ಟ ವಾಕ್ಯಗಳನ್ನು ಬಳಸಿ ಸಹೃದಯನಿಗೆ ಸ್ಪಷ್ಟವಾಗಿ ತಿಳಿಯುವಂತೆ ಮಾಡುತ್ತಾರೆ.

ಈ ರೀತಿ ಗುಣಮುಖ ನಾಟಕವನ್ನು ವಸ್ತು, ಭಾಷೆ, ತಂತ್ರ, ಶೈಲಿ ಈ ನಾಲ್ಕು ಮಗ್ಗಲುಗಳಿಂದ ಅಧ್ಯಯನ ಮಾಡಿದರು ಸಾಹಿತ್ಯ ನಿಂತ ನೀರಲ್ಲ ಹರಿಯುತ್ತಿರುವ ಸಮುದ್ರ, ಇದು ಕೇವಲ ಪ್ರಯತ್ನವಷ್ಟೆ. ಸಂಶೋಧನೆಗೆ ಆಳ ಅಗಲವೆಲ್ಲಿ; 'ಗುಣಮುಖ' ನಾಟಕ ಹೆಸರೆ ಸೂಚಿಸುವಂತೆ ಗುಣದಿಂದ ವಿಮುಖನಾದವನು ಎನ್ನವು ಅರ್ಥದಲ್ಲಿ ಮೂಡಿಬಂದಿದೆ. ಇನ್ನೊಂದು ಅರ್ಥದಲ್ಲಿ ಅನಾರೋಗ್ಯದಿಂದ ರೋಗಪೀಡಿತನಾದ ನಾದಿರ್‌ಷಾ ಹಕೀಮ ಅಲಾವಿಖಾನ್‌ನಿಂದ ಗುಣಮುಖನಾದನು ಎನ್ನುವ ಅರ್ಥಕೊಡುತ್ತದೆ.

**ಅಡಿಟಿಪ್ಪಣಿಗಳು :**

1. ಮಿರ್ಜಿ ಅಣ್ಣಾರಾವ : ಪು–379.
2. ಲಂಕೇಶ ಪಿ. : ಗುಣಮುಖ . ಗುಣಮುಖ ಒಂದು ಟಿಪ್ಪಣಿ.
3. ಧಾರವಾಡಕರ ರಾಯ :ಭಾಷಾಶಾಸ್ತ್ರ . ಪು– 4.
4. ಸವದತ್ತಿ ಮಠ ಸಂಗಮೇಶ : ಕನ್ನಡ ಭಾಷಾ ವ್ಯಾಸಂಗ . ಪು– 16.
5. ಲಂಕೇಶ ಪಿ. : ಗುಣಮುಖ . ಪು– 12.
6. ಲಂಕೇಶ ಪಿ. : ಗುಣಮುಖ . ಪು– 12.
7. ಲಂಕೇಶ ಪಿ. : ಗುಣಮುಖ . ಪು– 13
8. ಗಿರಡ್ಡಿ ಗೋವಿಂದ ರಾಜ : ಕಾದಂಬರಿ ವಸ್ತು ಮತ್ತು ತಂತ್ರ . ಪು– 4.
9. ಲಂಕೇಶ ಪಿ. : ಗುಣಮುಖ . ಪು– 6.
10. ಜವರೆಗೌಡ : ಗದ್ಯಶೈಲಿ . ಪು– 170.
11. ಸಬರದ ವಿಜಯಶ್ರೀ : ಅನುಪಮಾ ನಿರಂಜನರ ಕಾದಂಬರಿಗಳು. ಪು–200.
12. ಲಂಕೇಶ ಪಿ. : ಗುಣಮುಖ . ಪು– 32.